# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ **30–05–2019ರ ಗುರುವಾರದಂದು ಪೂರ್ವಾಹ್ನ 11.00 ಗಂಟೆಗೆ ಜರುಗಿದ ಸಿಂಡಿಕೇಟಿನ ವಿಶೇಷ ಸಭೆಯ ನಡವಳಿಗಳು.**

**ಹಾಜರಿದ್ದ ಸದಸ್ಯರು:**

1. ಪ್ರೊ. ಜಿ. ಹೇಮಂತಕುಮಾರ್ – ಕುಲಪತಿಗಳು ಹಾಗೂ ಅಧ್ಯಕ್ಷರು
2. ಪ್ರೊ. ಮಹದೇವ – ಸದಸ್ಯರು
3. ಕು. ಸಹನಾ ಶಿವಪ್ಪ – ಸದಸ್ಯರು
4. ಡಾ. ರಾಜಗೋಪಾಲ್ – ಸದಸ್ಯರು
5. ಡಾ. ಎಂ. ಪ್ರೀತಿ – ಸದಸ್ಯರು
6. ಶ್ರೀ ಜಿ. ಅಶ್ವತನಾರಾಯಣ – ಸದಸ್ಯರು
7. ಪ್ರೊ. ಕೆ.ಟಿ. ಅಪ್ಪಾಜಪ್ಪ – ಸದಸ್ಯರು
8. ಪ್ರೊ. ಕೆ.ಎಂ. ಮಹದೇವನ್ – ಸದಸ್ಯರು
   ಕುಲಸಚಿವರು (ಪರೀಕ್ಷಾಂಗ)
9. ಪ್ರೊ. ಲಿಂಗರಾಜ ಗಾಂಧಿ – ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

**ಹಾಜರಾಗದ ಸದಸ್ಯರು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಮಾನ್ಯ ಕುಲಪತಿಗಳು ಸಿಂಡಿಕೇಟಿನ ವಿಶೇಷ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು.

ಲೋಕಸಭಾ ಚುನಾವಣೆಯ ನಿಮಿತ್ತ ನೀತಿ ಸಂಹಿತೆ ಜಾರಿಯಲ್ಲಿದ್ದುದ್ದರಿಂದ ಸಾಮಾನ್ಯ ಸಭೆಗಳನ್ನು ಏರ್ಪಡಿಸಲು ಸಾಧ್ಯವಾಗದ ಕಾರಣ ಕೆಲವು ತುರ್ತು ವಿಷಯಗಳನ್ನು ಸಿಂಡಿಕೇಟ್‌ಗೆ ಮಂಡಿಸಿ ತೀರ್ಮಾನ ತೆಗೆದುಕೊಳ್ಳುವ ಸಲುವಾಗಿ ಈ ವಿಶೇಷ ಸಭೆಯನ್ನು ಆಯೋಜಿಸಲಾಗಿದೆ. ಎಲ್ಲಾ ಸದಸ್ಯರು ಚರ್ಚೆಯಲ್ಲಿ ಪಾಲ್ಗೊಂಡು ಉತ್ತಮ ಸಲಹೆಗಳನ್ನು ನೀಡಿ ತೀರ್ಮಾನ ಕೈಗೊಳ್ಳಲು ಸಹಕರಿಸಬೇಕೆಂದು ಮಾನ್ಯ ಕುಲಪತಿಗಳು ಕೋರಿದರು.

ಸಭೆಯ ಸದಸ್ಯರೆಲ್ಲರಿಗೂ ಸ್ವಾಗತ ಕೋರಿದ ಕುಲಸಚಿವರು ನಂತರ ಕಾರ್ಯಸೂಚಿಯಂತೆ ವಿಷಯಗಳನ್ನು ಸಭೆಯಲ್ಲಿ ಮಂಡಿಸಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| **2019/5.1** | ಮಾನ್ಯ ಉನ್ನತ ಶಿಕ್ಷಣ ಸಚಿವರ ವಾಹನಕ್ಕೆ ಮೈಸೂರು ವಿಶ್ವವಿದ್ಯಾನಿಲಯ ವತಿಯಿಂದ ಇಂಧನ ನೀಡುತ್ತಿರುವ ಹಾಗೂ ನೀಡಲಿರುವ ವಿಷಯವನ್ನು ಸಿಂಡಿಕೇಟ್ ಸಭೆಗೆ ಅನುಸಮರ್ಥನೆ ಮತ್ತು ನಿರ್ಣಯಕ್ಕಾಗಿ ಮಂಡಿಸುವ ಬಗೆಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯಗಳ ಸಮಕುಲಾಧಿಪತಿಗಳಾದ ಮಾನ್ಯ ಉನ್ನತ ಶಿಕ್ಷಣ ಸಚಿವರ ವಾಹನವು ಮೈಸೂರಿಗೆ ಆಗಾಗ್ಗೆ ಭೇಟಿ ನೀಡಿದಾಗ ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಇಂಧನ ಒದಗಿಸುತ್ತಿರುವ ವಿಷಯವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2019/5.2** | ದಿವಂಗತ ರಜನಿಕಾಂತ್ ಕೆ., ಸೇವಕ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಅವರ ಪತ್ನಿಯಾದ ಶ್ರೀಮತಿ ಗೀತಾ.ಎಸ್., ರವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ ಅನ್ವಯ ದಿವಂಗತ ರಜನಿಕಾಂತ್ ಕೆ., ಸೇವಕ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಅವರ ಪತ್ನಿಯಾದ ಶ್ರೀಮತಿ ಗೀತಾ.ಎಸ್., ರವರಿಗೆ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗೆ ನೇಮಕ ಮಾಡಿಕೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |
| **2019/5.3** | ಶ್ರೀಮತಿ ಜಯಶ್ರೀ ಜಗದೀಶ್, ಸಹಾಯಕ ಗ್ರಂಥಪಾಲಕರು, ಮಾನಸಗಂಗೋತ್ರಿ, ಮೈಸೂರು ಇವರು ವಿದೇಶ ಪ್ರವಾಸಕ್ಕೆ (ಅಮೇರಿಕಾ) ತೆರಳಲು ಅನುಮತಿಸಿರುವ ಬಗ್ಗೆ. |
| ತೀರ್ಮಾನ | ಶ್ರೀಮತಿ ಜಯಶ್ರೀ ಜಗದೀಶ್, ಸಹಾಯಕ ಗ್ರಂಥಪಾಲಕರು, ಮಾನಸಗಂಗೋತ್ರಿ, ಮೈಸೂರು ಇವರು ದಿನಾಂಕ 6-5-2019ರಿಂದ 04-06-2019ರವರೆಗೆ ಅವರ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆಯೂ ಇಲ್ಲದಂತೆ ವಿದೇಶ ಪ್ರವಾಸಕ್ಕೆ (ಅಮೇರಿಕಾ) ಹೋಗಿಬರಲು ಅನುಮತಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **2019/5.4** | ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿಶ್ವಕೋಶ ವಿಭಾಗಕ್ಕೆ ಇಬ್ಬರು ಗೌರವ ಸಂಪಾದಕರನ್ನು ನೇಮಿಸಿಕೊಳ್ಳುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯಕ್ಕೆ ನ್ಯಾಕ್ ತಂಡವು ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಪ್ರತಿಷ್ಠಿತ ವಿಶ್ವಕೋಶ ಯೋಜನೆಯ ಎನ್‌ಸೈಕ್ಲೋಪಿಡಿಯ 14 ಸಂಪುಟಗಳ ಪರಿಷ್ಕರಣೆ ಮತ್ತು ಪುನರ್ ಮುದ್ರಣಕಾರ್ಯ ನಡೆಯುತ್ತಿದ್ದು ತ್ವರಿತವಾಗಿ ಸಕಾಲದಲ್ಲಿ ಈ ಯೋಜನೆಯ ಕೆಲಸವನ್ನು ಪೂರ್ಣಗೊಳಿಸುವ ಸಲುವಾಗಿ ಇಲ್ಲಿಗೆ ಗೌರವ ಸಂಪಾದಕರನ್ನಾಗಿ ಮಾಸಿಕ ಸಂಭಾವನೆಯ ಆಧಾರದ ಮೇಲೆ ಈ ಕೆಳಕಂಡ ಇಬ್ಬರು ತಜ್ಞರನ್ನು ನೇಮಕ ಮಾಡಿಕೊಳ್ಳಲು ಸಿಂಡಿಕೇಟ್ ಅನುಮೋದಿಸಿತು.<br>1. ಡಾ. ಹಾ.ತಿ. ಕೃಷ್ಣೇಗೌಡ, ನಿವೃತ್ತ ಕಾರ್ಯನಿರ್ವಾಹಕ ಸಂಪಾದಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ಇವರಿಗೆ ಮಾಸಿಕ ಗೌರವಧನ ರೂ. 30,000/- (ಮೂವತ್ತು ಸಾವಿರ ಮಾತ್ರ).<br>2. ಶ್ರೀ ಸಾತನೂರು ದೇವರಾಜ, ನಿವೃತ್ತ ಪ್ರಾಂಶುಪಾಲರು, ಮೈಸೂರು ಇವರಿಗೆ ಮಾಸಿಕ ಗೌರವಧನ ರೂ. 20,000/- (ಇಪ್ಪತ್ತು ಸಾವಿರ ಮಾತ್ರ). |

| | |
|---|---|
| **2019/5.5** | ಡಾ. ನಿಂಗಮ್ಮ.ಸಿ. ಬೆಟ್ಸೂರ್, ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ವಿದೇಶ ಪ್ರವಾಸಕ್ಕೆ (ಯೂರೋಪ್) ತೆರಳಲು ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | ದಿನಾಂಕ 22-10-2018ರಿಂದ 21-10-2019ರವರೆಗೆ ಒಂದು ವರ್ಷದ ಅವಧಿಗೆ ಸೆಬಾಟಿಕಲ್ ರಜೆಯಲ್ಲಿರುವ ಡಾ. ನಿಂಗಮ್ಮ .ಸಿ ಬೆಟ್ಸೂರ್, ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆಯಿಲ್ಲದಂತೆ ದಿನಾಂಕ 14-05-2019ರಿಂದ 04-06-2019ರವರೆಗೆ ವಿದೇಶ ಪ್ರವಾಸಕ್ಕೆ (ಯೂರೋಪ್) ಹೋಗಿಬರಲು ಸಿಂಡಿಕೇಟ್ ಅನುಮೋದಿಸಿತು. |
| **2019/5.6** | 2016-17ನೇ ಶೈಕ್ಷಣಿಕ ಸಾಲಿನಲ್ಲಿ ಸೆಂಟ್ ಫಿಲೋಮಿನಾಸ್ ಕಾಲೇಜು, ಮೈಸೂರು – ಇಲ್ಲಿ ಎಂ.ಎ., ಇಂಗ್ಲಿಷ್ ಸ್ನಾತಕೋತ್ತರ ಪದವಿಯ ಪ್ರವೇಶಾತಿಯ ಬಗ್ಗೆ. |
| | ಪ್ರೊ. ಮಹದೇವರವರು ಮಾತನಾಡಿ 2016-17ನೇ ಶೈಕ್ಷಣಿಕ ಸಾಲಿನಲ್ಲಿ ಸೆಂಟ್ ಫಿಲೋಮಿನಾಸ್ ಕಾಲೇಜು, ಮೈಸೂರು ಇವರು, ಇಲ್ಲಿನ ಎಂ.ಎ. ಇಂಗ್ಲಿಷ್ ಸ್ನಾತಕೋತ್ತರ ಪದವಿಗೆ ಅರ್ಹತಾ ಪದವಿಯಲ್ಲಿ ಕನಿಷ್ಠ ಅಂಕಗಳನ್ನು ಪಡೆಯದ 13 ವಿದ್ಯಾರ್ಥಿಗಳ ಪ್ರವೇಶಾತಿ ಅನುಮೋದನೆಯನ್ನು ರದ್ದುಪಡಿಸಿ, ಕಾಲೇಜಿನ ಆಡಳಿತ ಮಂಡಳಿಗೆ ದಂಡ ವಿಧಿಸಬೇಕೆಂದು ಒತ್ತಾಯಿಸಿದರು.<br><br>ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಪ್ರವೇಶಾತಿಯನ್ನು ರದ್ದುಪಡಿಸದೇ, ಕಾಲೇಜಿಗೆ ದಂಡವನ್ನು ವಿಧಿಸಬಹುದೆಂಬ ಅಭಿಪ್ರಾಯವನ್ನು ಶ್ರೀ ಜಿ. ಅಶ್ವತ್‌ನಾರಾಯಣ, ಡಾ. ರಾಜಗೋಪಾಲ್, ಶ್ರೀ ಅಪ್ಪಾಜಪ್ಪ ಮತ್ತು ಡಾ. ಪ್ರೀತಿಯವರು ನೀಡಿದರು.<br><br>ವಿಶ್ವವಿದ್ಯಾನಿಲಯದಲ್ಲಿ ಉನ್ನತ ಪ್ರಾಧಿಕಾರವಾದ ಶಿಕ್ಷಣ ಮಂಡಳಿಯ ಮುಂದೆ ಚರ್ಚಿತವಾಗಿ ಈ ವಿಷಯವು ಅನುಮೋದನೆಯಾಗಿರುತ್ತದೆಂದು ಕುಲಸಚಿವರು ಸಭೆಗೆ ತಿಳಿಸಿದರು.<br><br>ಸುದೀರ್ಘ ಚರ್ಚೆಯ ನಂತರ ಮಾನ್ಯ ಕುಲಪತಿಗಳು ವಿಷಯವನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮರುಮಂಡಿಸಲು ತಿಳಿಸಿದರು. |
| ತೀರ್ಮಾನ | ಸಂಪೂರ್ಣ ವಿವರಗಳೊಡನೆ ವಿಷಯವನ್ನು ಮರುಮಂಡಿಸಲು ತೀರ್ಮಾನಿಸಲಾಯಿತು. |
| **2019/5.7** | ಶ್ರೀಮತಿ ರಾಜಮ್ಮ, ಸೇವಕಿ, ಹಿಂದಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಸ್ವಯಂ ನಿವೃತ್ತಿ ಪಡೆಯಲು ಅನುಮತಿ ನೀಡುವ ಬಗೆಗೆ. |
| ತೀರ್ಮಾನ | ಶ್ರೀಮತಿ ರಾಜಮ್ಮ, ಸೇವಕಿ, ಹಿಂದಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಸ್ವಯಂ ನಿವೃತ್ತಿ ಪಡೆಯಲು ನಿಯಮಾನುಸಾರ ಅರ್ಹರಿದ್ದು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಬಾಕಿ ಇದ್ದಲ್ಲಿ ಅವರು ನಿವೃತ್ತಿ ಪಡೆಯುವಾಗ ಬರುವ ಉಪದಾನ ಮತ್ತು ಇತರೆ ನಿವೃತ್ತಿ ಸೌಲಭ್ಯಗಳಿಂದ ಕಡಿತಗೊಳಿಸುವ ಷರತ್ತಿಗೊಳಪಟ್ಟು ದಿನಾಂಕ 30-06-2019ರಂದು ಸ್ವಯಂ ನಿವೃತ್ತಿ ಪಡೆಯಲು ಸಿಂಡಿಕೇಟ್ ಅನುಮೋದಿಸಿತು. |
| **2019/5.8** | ಡಾ. ಶೋಭಾ ಜಗನ್ನಾಥ್, ಪ್ರಾಧ್ಯಾಪಕರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಅವರಿಗೆ ಯುನೈಟೆಡ್ ಕಿಂಡಮ್‌ಗೆ ತೆರಳಲು ಅನುಮತಿ ನೀಡಿರುವ ಬಗ್ಗೆ. |
| ತೀರ್ಮಾನ | ಡಾ. ಶೋಭಾ ಜಗನ್ನಾಥ್, ಪ್ರಾಧ್ಯಾಪಕರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ ಅವರು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆಯೂ ಇಲ್ಲದಂತೆ ಅವರ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ದಿನಾಂಕ 9-4-2019ರಿಂದ 12-4-2019ರವರೆಗೆ ಸ್ವಂತ ಕೆಲಸದ ನಿಮಿತ್ತ ಯುನೈಟೆಡ್ ಕಿಂಗಡಮ್‌ನ ಸರ್ರೆ ಯುನಿವರ್ಸಿಟಿಗೆ ವೈಯಕ್ತಿಕ ನೆಲೆಗಟ್ಟಿನಲ್ಲಿ ವಿದೇಶಕ್ಕೆ ಹೋಗಿಬರಲು ಅನುಮತಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |

| | |
|---|---|
| **2019/5.9** | 2019–20ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾನಿಲಯದ ವಿವಿಧ ಶುಲ್ಕಗಳನ್ನು ಪರಿಷ್ಕರಿಸುವ ಬಗ್ಗೆ. |
| | ಶ್ರೀ ಜಿ. ಅಶ್ವತ್‌ನಾರಾಯಣರವರು ಮಾತನಾಡಿ ಬಿ.ಬಿ.ಎ. ಕೋರ್ಸ್‌ನ ಪರೀಕ್ಷಾ ಶುಲ್ಕವು ಹೆಚ್ಚಿದ್ದು, ಬಿ.ಕಾಂ ಮತ್ತು ಬಿ.ಬಿ.ಎ ಕೋರ್ಸುಗಳ ಪರೀಕ್ಷಾ ಶುಲ್ಕವನ್ನು ಏಕರೂಪವಾಗಿ ಪರಿಷ್ಕರಿಸಬೇಕೆಂದು ಮತ್ತು ಪರೀಕ್ಷಾ ಸಂಭಾವನೆಯನ್ನು ಹಲವಾರು ವರ್ಷಗಳಿಂದ ಪರಿಷ್ಕರಿಸದೇ ಇರುವುದರಿಂದ ಪರೀಕ್ಷಾ ಸಂಭಾವನೆಯನ್ನು ಸಹ ಪರಿಷ್ಕರಿಸಲು ಕೋರಿದರು.<br>ಇದಕ್ಕೆ ಉತ್ತರಿಸಿದ ಮಾನ್ಯ ಕುಲಪತಿಗಳು, ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಅನುಮೋದನೆ ಪಡೆದು ಈಗಾಗಲೇ ಪರೀಕ್ಷಾ ಶುಲ್ಕಗಳನ್ನು ನಿಗದಿಪಡಿಸಿ 2019–2020ನೇ ಸಾಲಿನ ಅಧಿಸೂಚನೆ ಹೊರಡಿಸಲಾಗಿರುವುದರಿಂದ ಬಿ.ಕಾಂ ಮತ್ತು ಬಿ.ಬಿ.ಎ ಕೋರ್ಸುಗಳ ಪರೀಕ್ಷಾ ಶುಲ್ಕವನ್ನು ಏಕರೂಪಗೊಳಿಸಲು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಈ ಬಗ್ಗೆ ಪರಿಶೀಲಿಸಲು ಶುಲ್ಕ ಪರಿಷ್ಕರಣ ಸಮಿತಿಗೆ ಸೂಚಿಸಿ ಕ್ರಮಕೈಗೊಳ್ಳುವುದಾಗಿ ತಿಳಿಸಿದರು. ಪರೀಕ್ಷಾ ಸಂಭಾವನೆಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧಕರ ಆಕ್ಷೇಪಣೆ ವ್ಯಕ್ತಪಡಿಸಿ ವಸೂಲಾತಿಗೆ ಶಿಫಾರಸ್ಸು ಮಾಡಿರುತ್ತಾರೆ. ಇದನ್ನು ಕೈಬಿಡುವಂತೆ ಕೋರಲಾಗುತ್ತಿದೆ. ಆದ್ದರಿಂದ ಪರೀಕ್ಷಾ ಸಂಭಾವನೆಯನ್ನು ಪರಿಷ್ಕರಿಸುವ ವಿಷಯವನ್ನು ಆನಂತರ ಪರಿಶೀಲಿಸಬಹುದಾಗಿದೆಯೆಂದರು. |
| ತೀರ್ಮಾನ | 2019–20ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾನಿಲಯದ ವಿವಿಧ ಶುಲ್ಕಗಳನ್ನು ಪರಿಷ್ಕರಿಸಿ ಅದರಂತೆ ಈಗಾಗಲೇ ಅಧಿಸೂಚನೆ ಹೊರಡಿಸಲಾಗಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2019/5.10** | ಡಾ. ಸಿ. ಭಾನುಮತಿ, ತಾತ್ಕಾಲಿಕ ವೈದ್ಯಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು ಅವರ ವೇತನವನ್ನು ಹೆಚ್ಚಿಸುವ ಬಗ್ಗೆ |
| ತೀರ್ಮಾನ | ಡಾ. ಸಿ.ಭಾನುಮತಿಯವರು ವಿಶ್ವವಿದ್ಯಾನಿಲಯದಲ್ಲಿ ದಿನಾಂಕ 10–06–2010ರಿಂದ ತಾತ್ಕಾಲಿಕ ವೈದ್ಯಾಧಿಕಾರಿಗಳಾಗಿ ರೂ. 39,200/- ಸಂಚಿತ ವೇತನದ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿದ್ದು ಸರ್ಕಾರದಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡು 3 ವರ್ಷಗಳ ತರುವಾಯ ಅವರನ್ನು ಸಕ್ರಮಗೊಳಿಸಿರುವಂತೆ ತಮಗೂ ವೈದ್ಯಾಧಿಕಾರಿ ಹುದ್ದೆಯನ್ನು ಸಕ್ರಮಗೊಳಿಸಿಕೊಡಬೇಕೆಂದು ಕೋರಿರುವುದನ್ನು ಗಮನಿಸಿದ ಸಿಂಡಿಕೇಟ್ ಸಕ್ರಮಗೊಳಿಸುವುದರ ಬದಲಿಗೆ ಸರ್ಕಾರದಲ್ಲಿನ ನಿಯಮಗಳನ್ನು ಅವಲೋಕಿಸಿ ಅವರ ವೇತನವನ್ನು ಪರಿಷ್ಕರಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2019/5.11** | 2019–20ನೇ ಶೈಕ್ಷಣಿಕ ಸಾಲಿನಿಂದ ಮೈಸೂರಿನ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಸ್ಥಳ ಬದಲಾವಣೆ ಮಾಡುವ ಬಗೆಗೆ. |
| ತೀರ್ಮಾನ | 2019–20ನೇ ಶೈಕ್ಷಣಿಕ ಸಾಲಿನಿಂದ ಮೈಸೂರಿನ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಕಟ್ಟಡವನ್ನು ಜೆ.ಎಲ್.ಬಿ. ರಸ್ತೆ, ಮೈಸೂರು–05ರಿಂದ ನೂತನವಾಗಿ ವಾಲ್ಮೀಕಿ ರಸ್ತೆ, ಪಡುವಾರಹಳ್ಳಿಯಲ್ಲಿ ನಿರ್ಮಿಸಲಾಗಿರುವ ಕಟ್ಟಡಕ್ಕೆ ಸ್ಥಳ ಬದಲಾವಣೆ ಮಾಡಲು ಸ್ಥಳಾ ಪರಿಶೀಲನಾ ಸಮಿತಿಯು ನೀಡಿರುವ ವರದಿಯನ್ನು ಅಂಗೀಕರಿಸಿ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **2019/5.12** | 2019–20ನೇ ಶೈಕ್ಷಣಿಕ ಸಾಲಿನಿಂದ ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜಿನ ಸ್ಥಳ ಹಾಗೂ ಹೆಸರು ಬದಲಾವಣೆ ಮಾಡುವ ಬಗೆಗೆ. |
| ತೀರ್ಮಾನ | 2019–20ನೇ ಶೈಕ್ಷಣಿಕ ಸಾಲಿನಿಂದ ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡವನ್ನು ಪ್ರಸ್ತುತ ವಿಳಾಸದಿಂದ ನೂತನವಾಗಿ ನಿರ್ಮಿಸಲಾಗಿರುವ # 45–46, ಕೆ.ಆರ್.ಎಸ್. ರಸ್ತೆ, ಮೇಟಗಳ್ಳಿ ಕೈಗಾರಿಕಾ ಪ್ರದೇಶ ಇಲ್ಲಿಗೆ ಬದಲಾವಣೆ ಮಾಡಿಕೊಳ್ಳಲು ಮತ್ತು "ಜೆ.ಎಸ್.ಎಸ್.ಎಸ್ ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜು" ಎಂದು |

| | |
|---|---|
| | ಹೆಸರು ಬದಲಾಯಿಸಲು ಸ್ಥಳ ಪರಿಶೀಲನಾ ಸಮಿತಿಯು ನೀಡಿರುವ ವರದಿಯನ್ನು ಅಂಗೀಕರಿಸಿ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **2019/5.13** | ಡಾ. ದಯಾನಂದ ಮಾನೆ, ಪ್ರಾಧ್ಯಾಪಕರು, ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ವಿರುದ್ಧ ದಾಖಲಾಗಿದ್ದ ಲೈಂಗಿಕ ಕಿರುಕುಳದ ದೂರಿನ ಮೇಲೆ ವಿಶ್ವವಿದ್ಯಾನಿಲಯದ ಆಂತರೀಕ ದೂರು ಸಮಿತಿಯು ವಿಚಾರಣೆಯನ್ನು ನಡೆಸಿ ನೀಡಿರುವ ವರದಿಯ ಬಗ್ಗೆ. |
| ತೀರ್ಮಾನ | ಡಾ. ದಯಾನಂದ ಮಾನೆ, ಪ್ರಾಧ್ಯಾಪಕರು, ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ವಿರುದ್ಧ ಲೈಂಗಿಕ ಕಿರುಕುಳದ ಆರೋಪಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ದೂರು ಸಮಿತಿಯು ಸಲ್ಲಿಸಿದ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಸದರಿ ಪ್ರಾಧ್ಯಾಪಕರ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳು ಇಲ್ಲದೇ ಆರೋಪಗಳು ಸಾಬೀತಾಗದೇ ಇರುವುದರಿಂದ ಈ ಪ್ರಕರಣವನ್ನು ಇಲ್ಲಿಗೆ ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| **2019/5.14** | ಮೈಸೂರು ವಿಶ್ವವಿದ್ಯಾನಿಲಯದ ಕರಡು ಪಿಂಚಣಿ ಅಧಿನಿಯಮ-1979ಕ್ಕೆ ತಿದ್ದುಪಡಿ ಮಾಡುವ ಬಗ್ಗೆ. |
| | ಮೈಸೂರು ವಿಶ್ವವಿದ್ಯಾನಿಲಯವು ಹಿರಿಯದಾದ ವಿಶ್ವವಿದ್ಯಾನಿಲಯವಾಗಿರುವುದರಿಂದ ಸಾಕಷ್ಟು ಸಂಖ್ಯೆಯಲ್ಲಿ ಪಿಂಚಣಿದಾರರಿರುವುದನ್ನು ಗಮನಕ್ಕೆ ತರುತ್ತಾ ಬೇರೆ ವಿಶ್ವವಿದ್ಯಾನಿಲಯಗಳಿಂದ ದಿನಾಂಕ 1-4-2006ಕ್ಕೂ ಮುಂಚೆ ನೇಮಕಗೊಂಡು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಆಯ್ಕೆಯಾಗಿ ಬರುವ ಅಧ್ಯಾಪಕರಿಗೆ ಆಯಾ ವಿಶ್ವವಿದ್ಯಾನಿಲಯಗಳು ಪಿಂಚಣಿ ವಂತಿಕೆಯನ್ನು ನೀಡುತ್ತಿವೆ. ಆದರೆ ಮೈಸೂರು ವಿಶ್ವವಿದ್ಯಾನಿಲಯದಿಂದ ಬೇರೆ ವಿಶ್ವವಿದ್ಯಾನಿಲಯಕ್ಕೆ ನೇಮಕಗೊಳ್ಳುವ ಅಧ್ಯಾಪಕರಿಗೆ ಪಿಂಚಣಿ ವಂತಿಕೆಯನ್ನು ಚಾಲ್ತಿಯಲ್ಲಿದ್ದ ಅಧಿನಿಯಮನುಸಾರ ನೀಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಈ ನಿಟ್ಟಿನಲ್ಲಿ ಅಧಿನಿಯಮವನ್ನು ಪರಿಷ್ಕರಿಸಿ ಕುಲಾಧಿಪತಿಗಳ ಅಂಕಿತ ದೊರಕಿಸಿಕೊಡಲು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಆದರೆ ಸರ್ಕಾರವು ಕೆಲವು ಸ್ಪಷ್ಟೀಕರಣವನ್ನು ಕೋರಿ ಆ ಎಲ್ಲಾ ಅಂಶಗಳನ್ನು ಸೇರಿಸಿ ಪ್ರಾಧಿಕಾರಗಳ ಅನುಮೋದನೆ ಪಡೆದು ಕಳುಹಿಸಿಕೊಡುವಂತೆ ತಿಳಿಸಿರುವ ಹಿನ್ನೆಲೆಯಲ್ಲಿ ಹಳೆಯ ಪಿಂಚಣಿದಾರರಿಗೆ ವಂತಿಕೆ ನೀಡುವ ಹಾಗೂ ಹೊಸ ಪಿಂಚಣಿ ಯೋಜನೆ (NPS) ಅಡಿಯಲ್ಲಿ ಪಿಂಚಣಿ ನೀಡುವ ಅಂಶಗಳನ್ನು ಸೇರಿಸಿ ಪರಿಷ್ಕೃತ ಅಧಿನಿಯಮವನ್ನು ಪ್ರಾಧಿಕಾರಗಳ ಅನುಮೋದನೆಗೆ ಮಂಡಿಸಲಾಗಿದೆಯೆಂದು ಕುಲಸಚಿವರು ತಿಳಿಸಿದರು. |
| ತೀರ್ಮಾನ | ಸುದೀರ್ಘವಾಗಿ ಚರ್ಚಿಸಿದ ಸಿಂಡಿಕೇಟ್ ವಿಶ್ವವಿದ್ಯಾನಿಲಯದ ಕರಡು ಪರಿಷ್ಕೃತ ಪಿಂಚಣಿ ಅಧಿನಿಯಮವನ್ನು ಅಂಗೀಕರಿಸಿ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. ಮುಂದುವರೆದು ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿ ಬೇರೆ ವಿಶ್ವವಿದ್ಯಾನಿಲಯಕ್ಕೆ ನೇಮಕಗೊಂಡು ಈಗಾಗಲೇ ನಿವೃತ್ತರಾಗಿರುವ ಮತ್ತು 31-03-2020 ರವರೆಗೆ ನಿವೃತ್ತಗೊಳ್ಳಲಿರುವ ಅಧ್ಯಾಪಕರು ತೊಂದರೆಗೊಳಗಾಗಬಾರದೆಂಬ ಉದ್ದೇಶದಿಂದ ಸೂಕ್ತ ಮುಚ್ಚಳಿಕೆ ಪಡೆದು ಕುಲಾಧಿಪತಿಗಳ ಅಂಕಿತವನ್ನು ಕಾಯ್ದಿರಿಸಿ ವಿಶ್ವವಿದ್ಯಾನಿಲಯದ ಪಿಂಚಣಿ ವಂತಿಕೆಯನ್ನು ಆಯಾ ವಿಶ್ವವಿದ್ಯಾನಿಲಯಗಳಿಗೆ ವರ್ಗಾಯಿಸಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| **2019/5.15** | ಪರಿಸರ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರನ್ನು ನೇಮಿಸಿರುವ ಬಗ್ಗೆ ಅನುಸಮರ್ಥನೆಗಾಗಿ. |
| ತೀರ್ಮಾನ | ಪರಿಸರ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರಾದ ಪ್ರೊ. ಎಸ್.ಎಲ್.ಬೆಳಗಲಿ, ಪ್ರಾಧ್ಯಾಪಕರು ಇವರು ದಿನಾಂಕ 31-05-2019ರಂದು ನಿವೃತ್ತರಾಗುತ್ತಿರುವುದರಿಂದ ಈ ವಿಭಾಗದ ಅಧ್ಯಕ್ಷರನ್ನಾಗಿ ದಿನಾಂಕ 01-06-2019ರಿಂದ ಜಾರಿಗೆ ಬಂದಂತೆ ಡಾ. ಎ.ಜಿ. ದೇವಿಪ್ರಸಾದ್, ಪ್ರಾಧ್ಯಾಪಕರು ಇವರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ ಎರಡು ವರ್ಷಗಳ ಅವಧಿಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶವರೆಗೆ ನೇಮಕಮಾಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2019/5.16** | ದೈಹಿಕ ಶಿಕ್ಷಣ ಮತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ ಮತ್ತು ರೇಷ್ಮೆಕೃಷಿ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರುಗಳನ್ನು ನೇಮಕ ಮಾಡುವ ಸಂಬಂಧ ಸಿಂಡಿಕೇಟಿನ ಅನುಮತಿಗಾಗಿ. |
| ತೀರ್ಮಾನ | 1. ದೈಹಿಕ ಶಿಕ್ಷಣ ಮತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರಾದ ಡಾ. ಮದಿಅಳಗನ್, ಸಹಪ್ರಾಧ್ಯಾಪಕರು ಇವರ ವಿಭಾಗಾಧ್ಯಕ್ಷರ ಅವಧಿಯು ದಿನಾಂಕ 05-06-2019ರಂದು ಮುಕ್ತಾಯಗೊಳ್ಳುತ್ತಿದ್ದು ನಿಯಮಾನುಸಾರ ಸದರಿ ವಿಭಾಗದಲ್ಲಿ ಇವರ ನಂತರ ಹಿರಿಯರಾಗಿರುವ ಡಾ. ಸಿ.ವೆಂಕಟೇಶ್, ಸಹಾಯಕ ಪ್ರಾಧ್ಯಾಪಕರು ಇವರನ್ನು ಅಧ್ಯಕ್ಷರನ್ನಾಗಿ ದಿನಾಂಕ 06-06-2019ರಿಂದ ಜಾರಿಗೆ ಬಂದಂತೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ ಎರಡು ವರ್ಷಗಳ ಅವಧಿಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶವರೆಗೆ ನೇಮಕಮಾಡಲು; ಹಾಗೂ<br>2. ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರಾದ ಡಾ. ಮಂಜುನಾಥ್, ಪ್ರಾಧ್ಯಾಪಕರು ಇವರ ವಿಭಾಗಾಧ್ಯಕ್ಷರ ಅವಧಿಯು ದಿನಾಂಕ 05-06-2019ರಂದು ಮುಕ್ತಾಯಗೊಳ್ಳುತ್ತಿದ್ದು ನಿಯಮಾನುಸಾರ ಸದರಿ ವಿಭಾಗದಲ್ಲಿ ಇವರ ನಂತರ ಜ್ಯೇಷ್ಠತೆಯಲ್ಲಿ ಹಿರಿಯರಾಗಿರುವ ಡಾ. ಬಿ.ಸಣ್ಣಪ್ಪ, ಸಹ ಪ್ರಾಧ್ಯಾಪಕರು ಇವರನ್ನು ಅಧ್ಯಕ್ಷರನ್ನಾಗಿ ದಿನಾಂಕ 06-06-2019ರಿಂದ ಜಾರಿಗೆ ಬಂದಂತೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ ಎರಡು ವರ್ಷಗಳ ಅವಧಿಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶವರೆಗೆ ನೇಮಕಮಾಡಲು ಸಿಂಡಿಕೇಟ್ ಅನುಮೋದಿಸಿತು. |
| **2019/5.17** | 2019-20ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಎಸ್.ಟಿ.ಜಿ. ಪ್ರಥಮ ದರ್ಜೆ ಕಾಲೇಜು, ಚಿನಕುರಳಿ, ಪಾಂಡವಪುರ, ಇವರು ಬಿ.ಎ., ಬಿ.ಎಸ್ಸಿ., ಬಿ.ಬಿ.ಎ., ಕೋರ್ಸುಗಳನ್ನು ಪ್ರಾರಂಭಿಸಲು ಕೋರಿರುವುದರಿಂದ ಸ್ಥಳೀಯ ವಿಚಾರಣ ಸಮಿತಿಯು ಸಂಯೋಜನೆ ಮಂಜೂರಾತಿಗಾಗಿ ಸಲ್ಲಿಸಿರುವ ವರದಿ. |
| ತೀರ್ಮಾನ | 2019-20ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಎಸ್.ಟಿ.ಜಿ. ಪ್ರಥಮ ದರ್ಜೆ ಕಾಲೇಜು, ಚಿನಕುರಳಿ, ಪಾಂಡವಪುರ, ಇವರು ಬಿ.ಎ., ಬಿ.ಎಸ್ಸಿ., ಬಿ.ಬಿ.ಎ., ಕೋರ್ಸುಗಳನ್ನು ಪ್ರಾರಂಭಿಸಲು ಕೋರಿದ್ದು ಈ ಸಂಬಂಧ ನಿಯಮಾನುಸಾರ ಸ್ಥಳೀಯ ವಿಚಾರಣ ಸಮಿತಿಯು ಕಾಲೇಜಿನಲ್ಲಿ ಲಭ್ಯವಿರುವ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿ ಸಂಯೋಜನೆ ಮಂಜೂರಾತಿಗಾಗಿ ಸಲ್ಲಿಸಿರುವ ವರದಿಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2019/5.18** | 2017-18 ರಿಂದ 2019-20ನೇ ಶೈಕ್ಷಣಿಕ ಸಾಲಿನವರೆಗೆ ಮಾಂಡವ್ಯ ಪ್ರಥಮ ದರ್ಜೆ ಕಾಲೇಜಿಗೆ ಶಾಶ್ವತ ಸಂಯೋಜನೆಯನ್ನು ಮುಂದುವರೆಸಲು ಸ್ಥಳೀಯ ಸಮಿತಿಯು ಸಲ್ಲಿಸಿರುವ ವರದಿ. |
| ತೀರ್ಮಾನ | 2017-18 ರಿಂದ 2019-20ನೇ ಶೈಕ್ಷಣಿಕ ಸಾಲಿನವರೆಗೆ ಮಾಂಡವ್ಯ ಪ್ರಥಮ ದರ್ಜೆ ಕಾಲೇಜಿಗೆ ಶಾಶ್ವತ ಸಂಯೋಜನೆಯನ್ನು ಮುಂದುವರೆಸಲು ಸ್ಥಳೀಯ ಸಮಿತಿಯು ಸಲ್ಲಿಸಿರುವ ವರದಿಯ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| **2019/5.19** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಮಾಜ ಕಲ್ಯಾಣ ಇಲಾಖೆಯು ಗುರುತಿಸಿರುವ 76 ಬ್ಯಾಕ್‌ಲಾಗ್ ಬೋಧಕ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ. |
| ತೀರ್ಮಾನ | 1. ವಿಶ್ವವಿದ್ಯಾನಿಲಯದಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿಮಾಡುವ ಸಲುವಾಗಿ ದಿನಾಂಕ 24-06-2016ರಂದು ಈಗಾಗಲೇ ಹೊರಡಿಸಲಾಗಿದ್ದ ಪ್ರಕಟಣೆಯನ್ನು ರದ್ದುಪಡಿಸಲು ಮತ್ತು ಈ ಪ್ರಕಟಣೆಗೆ ಎದುರಾಗಿ ಅರ್ಜಿಗಳನ್ನು ಸಲ್ಲಿಸಿರುವ ಅಭ್ಯರ್ಥಿಗಳಿಗೆ ಅವರು ಪಾವತಿಸಿರುವ ಮೊತ್ತವನ್ನು ಹಿಂದಿರುಗಿಸಲು;<br>2. ವಿಶ್ವವಿದ್ಯಾನಿಲಯಕ್ಕೆ ಮಂಜೂರಾದ ಹುದ್ದೆಗಳಿಗೆ ಎದುರಾಗಿ ಶೇ.8ರ ಅನುಪಾತದಲ್ಲಿ ಲಭ್ಯವಾಗುವ ಹೈದಾರಬಾದ್ ಕರ್ನಾಟಕದ 54 ಹುದ್ದೆಗಳನ್ನು ಹಾಗೂ ಸಮಾಜ ಕಲ್ಯಾಣ ಇಲಾಖೆಯು ಅಂತಿಮವಾಗಿ ಗುರುತಿಸಿ ಸಲ್ಲಿಸಿರುವ ವರದಿಯ ಅನುಸಾರ ಮೈಸೂರು ವಿಶ್ವವಿದ್ಯಾನಿಲಯದಲ್ಲಿನ 76 ಬ್ಯಾಕ್ ಲಾಗ್ ಹುದ್ದೆಗಳನ್ನು ಭರ್ತಿಮಾಡಲು; ಹಾಗೂ<br>3. ಸಮಾಜ ಕಲ್ಯಾಣ ಇಲಾಖೆಯು ಸಲ್ಲಿಸಿರುವ ವರದಿಯಲ್ಲಿ ಕೆಲವು ಹುದ್ದೆಗಳಿಗೆ ವಿಷಯವಾರು ಹಂಚಿಕೆಯಾಗದಿರುವ Clubbed Reservation ಬಗ್ಗೆ ಪರಿಶೀಲಿಸಿದ ಸಿಂಡಿಕೇಟ್ ಅಂತಹ ಹುದ್ದೆಗಳನ್ನು ವಿಷಯವಾರು ಹಂಚಿಕೆ ಮಾಡಿಕೊಂಡು ಈ ಸಂಬಂಧ ಸರ್ಕಾರಕ್ಕೆ ಪತ್ರ ಬರೆಯುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಿ ಆದ್ಯತೆಯ ಮೇಲೆ ಪ್ರಕಟಣೆಯನ್ನು ಹೊರಡಿಸಿ ಸದರಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |
| **2019/5.20** | ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಾಪಕರು, ಗ್ರಂಥಪಾಲಕರು ಮತ್ತು ತತ್ಸಮಾನ ವೃಂದದ ಸಿಬ್ಬಂದಿಗಳಿಗೆ ದಿನಾಂಕ 01.01.2016ರ 7ನೇ ಪರಿಷ್ಕೃತ ಯುಜಿಸಿ ವೇತನಶ್ರೇಣಿಯನ್ನು ಜಾರಿಗೊಳಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಾಪಕರು, ಗ್ರಂಥಪಾಲಕರು ಮತ್ತು ತತ್ಸಮಾನ ವೃಂದದ ಸಿಬ್ಬಂದಿಗಳಿಗೆ ದಿನಾಂಕ 01.01.2016ರ 7ನೇ ಪರಿಷ್ಕೃತ ಯುಜಿಸಿ ವೇತನಶ್ರೇಣಿಯನ್ನು ಜಾರಿಗೊಳಿಸಲು ಹಾಗೂ ಈ ಸಂಬಂಧ ರಾಜ್ಯ ಸರ್ಕಾರವು ಮುಂದಿನ ದಿವಸಗಳಲ್ಲಿ ಪೂರಕ ಆದೇಶಗಳನ್ನು ಹೊರಡಿಸಿದಲ್ಲಿ ಅವುಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲು ಅನುಮೋದಿಸಿತು ಮತ್ತು ಈ ಸಂಬಂಧ ರಚಿಸಲಾದ "Statutes Relating to Direct-Recruitment and Career Advancement Scheme and Miscellaneous provisions to implement the Revised UGC Pay Scales to Teachers, Librarian and equivalent cadre personnel of University of Mysore" ಕರಡು ಅಧಿನಿಯಮವನ್ನು ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಸಲ್ಲಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2019/5.21** | ದಿನಾಂಕ 29.04.2019 ರಂದು ಸನ್ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ವಿಶ್ವವಿದ್ಯಾನಿಲಯದ ಆಡಳಿತ, ನಿರ್ವಹಣೆ ಮತ್ತು ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯ ಮೂರನೇ ಸಭೆಯ ಶಿಫಾರಸ್ಸಿನ ನಡವಳಿಗೆ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯುವ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ ಆಡಳಿತ, ನಿರ್ವಹಣೆ ಮತ್ತು ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯ ಮೂರನೇ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2019/5.22** | "ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಶಾಖಾ ಕೇಂದ್ರ, ಕೆ.ಆರ್. ನಗರ" ಸ್ಥಾಪಿಸುವ ಸಂಬಂಧ ಅಧಿನಿಯಮ(Statutes)ದ ಬಗೆಗೆ. |
| ತೀರ್ಮಾನ | "ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಶಾಖಾ ಕೇಂದ್ರ, ಕೆ.ಆರ್. ನಗರ" ಸ್ಥಾಪಿಸುವ ಸಂಬಂಧ ಸರ್ಕಾರದ ನಿರ್ದೇಶನದ ಮೇರೆಗೆ ಈಗಾಗಲೇ ಪ್ರಸ್ತಾವನೆಯನ್ನು ಮತ್ತು ಅಧಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |

| | |
|---|---|
| **2019/5.23** | 2019–20ನೇ ಸಾಲಿಗೆ ಮಾತ್ರ ಅನ್ವಯಿಸುವಂತೆ ವೃತ್ತಿಪರ ಕೋರ್ಸುಗಳನ್ನು ನಡೆಸುತ್ತಿರುವ ಸಂಸ್ಥೆಗಳು ಆಯಾ ಕ್ಷೇತ್ರದ ಸಂವಿಧಾನಾತ್ಮಕ ಸಂಸ್ಥೆಗಳ ಅನುಮತಿ ಪಡೆಯುವ ಬಗ್ಗೆ. |
| ತೀರ್ಮಾನ | ವೃತ್ತಿಪರ Management & Technology ಕೋರ್ಸುಗಳನ್ನು ನಡೆಸುತ್ತಿರುವ ವಿವಿಧ Specialized Centre/Instituteಗಳಿಗೆ ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಸಡಿಲಿಕೆ ನೀಡಿ ಮುಂಬರುವ ಶೈಕ್ಷಣಿಕ ವರ್ಷದಿಂದ ವೃತ್ತಿಪರ ಕೋರ್ಸುಗಳನ್ನು ಅವಶ್ಯವಿರುವ ಆಯಾ ಶೈಕ್ಷಣಿಕ ಕ್ಷೇತ್ರದ ಮಾನ್ಯತಾ ಸಂಸ್ಥೆಗಳಾದ AICTE/ICAR/MICನ ಅನುಮತಿ ಕಡ್ಡಾಯವಾಗಿ ಪಡೆಯತಕ್ಕದ್ದೆಂದು ಸಿಂಡಿಕೇಟ್ ತೀರ್ಮಾನಿಸಿತು. |
| **2019/5.24** | RUSA 2.0 ಅನುದಾನದ ಬಳಕೆಗಾಗಿ ವಿಶ್ವವಿದ್ಯಾನಿಲಯದಲ್ಲಿ Special Purpose Vehicle ಆರಂಭಿಸುವ ಬಗ್ಗೆ. |
| | ಸುದೀರ್ಘವಾಗಿ ಚರ್ಚಿಸಿದ ಸಭೆಯು RUSA 2.0 ಯೋಜನೆಯಡಿ ರೂ. 50.00 ಕೋಟಿ ಅನುದಾನ ನೀಡಲಾಗಿದ್ದು ಇದರಲ್ಲಿ ರೂ. 15.00 ಕೋಟಿ University Career Hub ಸ್ಥಾಪನೆಗೆ ಮಂಜೂರಾಗಿದ್ದು, ಸದ್ಯ 7.5 ಕೋಟಿ ರೂಪಾಯಿ ಬಿಡುಗಡೆಯಾಗಿರುತ್ತದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು 7:3ರ ಅನುಪಾತದಲ್ಲಿ ಹಣವನ್ನು ತೊಡಗಿಸಬೇಕಾಗುತ್ತದೆ ಮತ್ತು ಈ ಅನುದಾನವನ್ನು ನೇರವಾಗಿ ವಿಶ್ವವಿದ್ಯಾನಿಲಯಕ್ಕೆ ಬಿಡುಗಡೆ ಮಾಡುವುದಿಲ್ಲ. ಅನುದಾನದ ಬಳಕೆಗಾಗಿ Special Purpose Vehicle ರೂಪದಲ್ಲಿ Indian Companies Act ಕಲಂ 8ರ ಪ್ರಕಾರ 31–05–2019ರೊಳಗೆ ನೊಂದಾಯಿಸಿ ಲಾಭರಹಿತ ಕಂಪನಿಯನ್ನು ಆರಂಭಿಸಬೇಕಾಗುತ್ತದೆ ಮತ್ತು ಮಾರ್ಗಸೂಚಿಯ ಪ್ರಕಾರ ಕಾರ್ಯನಿರ್ವಹಿಸಬೇಕಾಗುತ್ತದೆಂದು ಮಾನ್ಯ ಕುಲಪತಿಗಳು ಸಭೆಗೆ ಮಾಹಿತಿ ನೀಡಿದರು. |
| ತೀರ್ಮಾನ | RUSA 2.0 ಯೋಜನೆಯಡಿ ಮಂಜೂರಾಗಿರುವ ರೂ. 50.00 ಕೋಟಿ ಅನುದಾನದಲ್ಲಿ University Career Hub ಸ್ಥಾಪನೆಗೆ ರೂ. 15.00 ಕೋಟಿಗಳನ್ನು ನಿಗದಿಗೊಳಿಸಿರುವುದನ್ನು ಗಮನಿಸಿದ ಸಿಂಡಿಕೇಟ್ ಸದರಿ ಅನುದಾನದ ಬಳಕೆಗಾಗಿ ವಿಶ್ವವಿದ್ಯಾನಿಲಯದಲ್ಲಿ Special Purpose Vehicle ರೂಪದಲ್ಲಿ ಆರಂಭಿಸುವ ಸಲುವಾಗಿ ನಿಯಮಾನುಸಾರ ಕಾರ್ಯನಿರ್ವಹಿಸಲು ಮೊದಲಿಗೆ Indian Companies Act ಕಲಂ 8ರ ಪ್ರಕಾರ ನೊಂದಾಯಿಸಲು ಸಿಂಡಿಕೇಟ್ ಅನುಮೋದಿಸಿತು. |
| **2019/5.25** | Promotions to University Teachers under UGC CAS. |
| Decision | The recommendations of the Selection Committee and Screening cum Evaluation Committees of various subjects for promotion of teachers in respective subjects and to the higher AGP placed before the meeting (Appendix – A) are approved.<br><br>Further, the Syndicate decided to extend the monetary benefits to the teachers who have applied/submitted their applications in prescribed form and are eligible on or before 31-12-2018 shall be applicable from 1st February 2019 or the from the date of decision of the Syndicate, whichever is later. |

| | |
|---|---|
| **2019/5.26** | Filing Writ Appeals against the judgements of the Hon'ble High Court dated 23.4.2019 and 25.4.2019 in respect of W.P. Nos.10178-99/2015 files by Sri Shivegowda & Ors., temporary Lecturers / Guest Lecturers, University of Mysore & Other connected batch of writ petitions – ratifications of the Syndicate – reg. |
| | ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳು ಹಾಗೂ ವಿವಿಧ ಅಧ್ಯಯನ ವಿಭಾಗಗಳಲ್ಲಿ ತಾತ್ಕಾಲಿಕ/ಅತಿಥಿ ಉಪನ್ಯಾಸಕರಾಗಿ ಕಳೆದ 10 ವರ್ಷ ಹಾಗೂ ಅದಕ್ಕಿಂತಲೂ ಹೆಚ್ಚು ಅವಧಿಗೆ ಸೇವೆ ಸಲ್ಲಿಸುವ ಅಧ್ಯಾಪಕರುಗಳನ್ನು, ಪರಿನಿಯಮಾವಳಿಗಳನ್ನು ರಚಿಸಿಕೊಂಡು ಆರು ತಿಂಗಳ ಅವಧಿಯೊಳಗೆ ಖಾಯಂಗೊಳಿಸಬೇಕೆಂದೂ ಹಾಗೂ ಅಲ್ಲಿಯವರೆಗೆ ಅವರ ಸೇವೆಯನ್ನು ಮುಂದುವರಿಸಬೇಕೆಂದು ಘನನ್ಯಾಯಾಲಯದ ಏಕ ಸದಸ್ಯ ಪೀಠ ತೀರ್ಪು ನೀಡಿರುತ್ತದೆ. ಈ ತೀರ್ಪನ್ನು ವಿಶ್ವವಿದ್ಯಾನಿಲಯ ನೇಮಿತ ಅಡ್ವೋಕೇಟ್‌ರವರು ಮೇಲ್ಮನವಿ ಸಲ್ಲಿಸಲು ಸೂಕ್ತವಾದ ಪ್ರಕರಣ ಆಗಿದೆಯೆಂದು ತಿಳಿಸಿದ ಹಿನ್ನೆಲೆಯಲ್ಲಿ ಹಾಗೂ ರಾಜ್ಯ ಸರ್ಕಾರದ ಪತ್ರ ಸಂಖ್ಯೆ ಇಡಿ 33 ಯುಎಂವಿ 2019, ದಿನಾಂಕ 15-05-2019ರಲ್ಲಿ ವಿ.ವಿ.ಯು ಮೇಲ್ಮನವಿ ಸಲ್ಲಿಸಬೇಕೆಂದು ನಿರ್ದೇಶಿಸಿದ ಹಿನ್ನೆಲೆಯಲ್ಲಿ, ಈ ಸಂಬಂಧ ಕ್ರಮಕೈಗೊಳ್ಳಲಾಗಿದ್ದು, ವಿಷಯವನ್ನು ಸಭೆಗೆ ಮಂಡಿಸಲಾಗಿದೆ ಎಂದು ಕುಲಸಚಿವರು ವಿವರಿಸಿದರು.<br>ಈಗಾಗಲೇ ವಿಶ್ವವಿದ್ಯಾನಿಲಯವು ಮೇಲ್ಮನವಿ ಸಲ್ಲಿಸಲು ಅಗತ್ಯ ಕ್ರಮವಹಿಸಲಾಗಿದ್ದು ಮಾನ್ಯ ಕುಲಪತಿಗಳು ವಿಷಯವನ್ನು ಅನುಸಮರ್ಥಿಸಬೇಕೆಂದು ಕೋರಿದರು.<br>ಸಿಂಡಿಕೇಟ್ ಸದಸ್ಯರೆಲ್ಲರೂ ಇದಕ್ಕೆ ಸಮ್ಮತಿಸಿದರು. |
| Decision | The Syndicate ratified the action taken by the University relating to the filing of Writ Appeals before the Division Bench of Hon'ble High Court against the judgements in W.P. Nos.10178-99/2015 filed by Sri Shivegowda & Others., Temporary Lecturers / Guest Lecturers, University of Mysore & Other connected batch of writ petitions. |

<u>ಇತರೆ ವಿಷಯಗಳು:</u>

- ಮಾನ್ಯ ಕುಲಸಚಿವರು ಮಾತನಾಡಿ ಇತ್ತೀಚೆಗೆ ನಿವೃತ್ತಗೊಂಡಿರುವ ಶ್ರೀ ಡಿ.ವೀರಣ್ಣ ಮತ್ತು ಶ್ರೀಮತಿ ಫಜೀಲಾಬಾನು, ಸಹಾಯಕ ಪ್ರಾಧ್ಯಾಪಕರು ಇವರಿಗೆ ಸಿ.ಎ.ಜಿ. ಸಲ್ಲಿಸಿರುವ ಆಕ್ಷೇಪಣೆಗಳಿಂದಾಗಿ ಯು.ಜಿ.ಸಿ. ವೇತನ ಶ್ರೇಣಿಯಲ್ಲಿ ನಿವೃತ್ತಿ ವೇತನ ನೀಡುವುದಕ್ಕೆ ಹಾಗೂ ಪಿಂಚಣಿ ಸೌಲಭ್ಯಗಳನ್ನು ವಿಸ್ತರಿಸಲು ಸಾಧ್ಯವಾಗದಿರುವ ಬಗ್ಗೆ ಪೂರ್ಣ ಚಿತ್ರಣವನ್ನು ಸಭೆಗೆ ತಿಳಿಸಿ ಮುಂದೆ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಸಿಂಡಿಕೇಟ್ ಸಲಹೆ ನೀಡಬೇಕೆಂದು ಕೋರಿದರು.

  **ಸುದೀರ್ಘ ಚರ್ಚೆಯ ನಂತರ ಸಂಬಂಧಪಟ್ಟವರಿಗೆ ಪತ್ರ ಬರೆದು ಸ್ಪಷ್ಟೀಕರಣ ಪಡೆದು ಅನಂತರ ಅಗತ್ಯ ಕ್ರಮಕೈಗೊಳ್ಳಲು ಸಿಂಡಿಕೇಟ್ ನಿರ್ಧರಿಸಿತು.**

- ಶಿಕ್ಷಣ ಮಂಡಳಿಯ ಸಭೆಯಲ್ಲಿ 2019-20ನೇ ಸಾಲಿನ ಆಯವ್ಯಯ ಇದರ ವರದಿಯನ್ನು ಮಂಡಿಸಲು ಕುಲಸಚಿವರಾದ ಪ್ರೊ. ಲಿಂಗರಾಜ ಗಾಂಧಿ ಅವರ ಹೆಸರನ್ನು ಸಿಂಡಿಕೇಟ್ ಸೂಚಿಸಿತು.

- NCTE ನಿಯಮಾನುಸಾರ ಬಿ.ಎ., ಬಿ.ಕಾಂ., ಬಿ.ಎಸ್ಸಿ ಕೋರ್ಸ್‌ಗಳನ್ನು ಬೋಧನೆ ಮಾಡುವ ಕಾಲೇಜುಗಳು 4 ವರ್ಷಗಳ ಬಿ.ಎ.ಎಡ್, ಬಿ.ಕಾಂ.ಎಡ್, ಬಿ.ಎಸ್ಸಿ.ಎಡ್ ಕೋರ್ಸ್‌ಗಳನ್ನು

ಪ್ರಾರಂಭಮಾಡಲು ಅವಕಾಶವಿದ್ದು ಪ್ರಸಕ್ತ ಸಾಲಿನಿಂದ ಯುವರಾಜ ಕಾಲೇಜಿನಲ್ಲಿ ಬಿ.ಎಸ್ಸಿ.ಎಡ್. ಕೋರ್ಸ್ ಪ್ರಾರಂಭಿಸಲು ಸಿಂಡಿಕೇಟ್ ತೀರ್ಮಾನಿಸಿತು.

- ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಪೂರೈಸಲಾಗುವ ಆಹಾರವನ್ನು ಕೇಂದ್ರಿಕೃತ ವ್ಯವಸ್ಥೆಯಡಿ ಶುದ್ಧ ಆಹಾರವನ್ನು ಒಂದು ಕಡೆ ತಯಾರಿಸಿ ವಿದ್ಯಾರ್ಥಿಗಳಿಗೆ ನೀಡಲು ಸಭೆಯು ಒಪ್ಪಿಗೆಯನ್ನು ಸೂಚಿಸಿ ಈ ಬಗ್ಗೆ ಸ್ಥಳ ಗುರುತಿಸಲು ಹಾಗೂ ಇತರೆ ಆಡಳಿತಾತ್ಮಕ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

- 2020ಕ್ಕೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ನ್ಯಾಕ್ ಕಮಿಟಿ ಭೇಟಿ ನೀಡುತ್ತಿರುವುದರಿಂದ ಪೂರ್ವಸಿದ್ಧತೆಗಾಗಿ ನುರಿತ ತಜ್ಞರ ಕೊರತೆ ಇರುವುದರಿಂದ ಈಗಾಗಲೇ ವಯೋನಿವೃತ್ತಿ ಹೊಂದಿರುವ ಪ್ರೊ. ಬಾಲಸುಬ್ರಮಣಿಯನ್‌ರವರನ್ನು 31ನೇ ಮೇ 2019 ರಂದು ನಿವೃತ್ತಿ ಹೊಂದಲಿರುವ ಪ್ರೊ. ಯಶವಂತ ಡೋಂಗ್ರೆಯವರ ಸೇವೆಯನ್ನು ಪಡೆಯಲು ಹಾಗೂ ಸದರಿಯವರಿಗೆ ಸಂಭಾವನೆಯನ್ನು ನೀಡಲು ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಯಿತು.

- ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ಸೇವೆಸಲ್ಲಿಸುತ್ತಿರುವ ಉದ್ಯೋಗಿಗಳ ವೇತನ ಹೆಚ್ಚಳಕ್ಕೆ ಸಂಬಂಧಿಸಿದ ವರದಿಯನ್ನು ಪ್ರೊ. ಬಾಲಸುಬ್ರಮಣಿಯನ್‌ಯವರು ಸಲ್ಲಿಸಿದ್ದು, ಸದರಿ ವರದಿಯನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಸಹ ಸಭೆಯು ತೀರ್ಮಾನಿಸಿತು.

ಡಾ. ರಾಜಗೋಪಾಲ್ ರವರು ಮಾತನಾಡಿ ಬಿ.ಎಡ್. ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳ ಸೇವೆಯನ್ನು ಸಕ್ರಮಗೊಳಿಸಲು ನೆಟ್/ಸ್ಲೆಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಇದನ್ನು ಪೂರೈಸಲು ಕಾಲಾವಕಾಶವನ್ನು ಮತ್ತಷ್ಟು ವಿಸ್ತರಿಸಿ ಅವಕಾಶ ಕಲ್ಪಿಸಿಕೊಡಬೇಕೆಂದು ಮತ್ತು ಅಂಕಪಟ್ಟಿಗಳಲ್ಲಿ ಗ್ರೇಡಿಂಗ್ ಪದ್ಧತಿಯು ಜಾರಿಯಲ್ಲಿರುವುದರಿಂದ ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತಿದೆ. ಆದ್ದರಿಂದ ಗ್ರೇಡ್ ಜೊತೆಗೆ ಅಂಕಗಳನ್ನು ನಮೂದಿಸಲು ಆದೇಶಿಸಬೇಕೆಂದು ಕೋರಿದರು.

ಬಿ.ಎಡ್. ಕಾಲೇಜುಗಳಲ್ಲಿರುವ ಸಮಸ್ಯೆಗಳನ್ನು ಬಗೆಹರಿಸುವ ಸಲುವಾಗಿ ಒಂದು ಸಮಿತಿಯನ್ನು ರಚಿಸಿ ಕ್ರಮಕೈಗೊಳ್ಳಲಾಗುವುದೆಂದು ಮಾನ್ಯ ಕುಲಪತಿಗಳು ತಿಳಿಸಿದರು.

**ಸಮಸ್ಯೆಗಳನ್ನು ಬಗೆಹರಿಸುವ ಸಲುವಾಗಿ ಸಮಿತಿ ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ನಿರ್ಧರಿಸಿತು.**

ಕೊನೆಯಲ್ಲಿ ಅಧ್ಯಕ್ಷರು ಹಾಗೂ ಮಾನ್ಯ ಕುಲಪತಿಗಳು ಸಭೆಯಲ್ಲಿ ಭಾಗವಹಿಸಿದಂತಹ ಸದಸ್ಯರುಗಳಿಗೆ ವಂದನೆಗಳನ್ನು ತಿಳಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ** **ಕುಲಪತಿ ಮತ್ತು ಅಧ್ಯಕ್ಷರು**